ಗಂಡಂದಿರಿದ್ದರೋ, ಆರೂವರೆ ಗಂಡಂದಿರಿದ್ದರೋ ಎಂಬ ಚರ್ಚೆಯೇ ವ್ಯರ್ಥ. ಹೀಗೆ ಯೋಚಿಸುವುದು ಕೊಳೆತು ನಾರುತ್ತಿರುವ ಇವತ್ತಿನ ಭಾರತೀಯ ಮನಸ್ಸಿನ ಕುರುಹಾಗಿದೆ; ಅದು ಇಂಥ ವಿಷಯಗಳತ್ತ ಬಹಳ ಬೇಗ ಹೊರಳುತ್ತದೆ...'

ತಿಪ್ಪೇಸ್ವಾಮಿ ಹಿಂದಿಯಿಂದ ಅನುವಾದಿಸಿರುವ 'ದ್ರೌಪದಿಯೋ? ಸಾವಿತ್ರಿಯೋ?' ಲೇಖನದಲ್ಲಿ ಸಾವಿತ್ರಿಯ ಕತೆಯ ಮೂಲಕ ಗಂಡು, ಹೆಣ್ಣಿನ ನಡುವಣ ಸಮಾನತೆ ಕುರಿತ ಮಹತ್ವದ ಪ್ರಶ್ನೆಯೊಂದನ್ನು ಲೋಹಿಯಾ ಎತ್ತುತ್ತಾರೆ:

'ಹಿಂದೂ ದಂತಕತೆಗಳಲ್ಲಿ ಯಮನ ಕೈಗಳಿಂದ ಗಂಡನನ್ನು ಬಿಡಿಸಿಕೊಂಡು ಬಂದ ಇಂಥ ಹೆಣ್ಣಿನ ಕತೆ ಇರುವ ಹಾಗೆ, ತನ್ನ ಹೆಂಡತಿ ಸತ್ತಾಗ ಅನುರಾಗದಿಂದ ಆಕೆಯನ್ನು ಯಮನ ಕೈಯಿಂದ ಬಿಡಿಸಿಕೊಂಡು ಬಂದ ಗಂಡನ ಒಂದು ಕತೆಯನ್ನಾದರೂ ಹೇಳಿ ಎಂದು ನಾನು ಅನೇಕರನ್ನು ಕೇಳಿದ್ದೇನೆ. ಹೀಗೆ ಹೆಂಡತಿಯನ್ನು ಬದುಕಿಸಿಕೊಂಡು ಬಂದ ಸತಿವ್ರತನ ಕತೆ ಕೇಳಲು ನಾನು ತುಂಬ ಕುತೂಹಲಿಯಾಗಿದ್ದೇನೆ.'

ಲೋಹಿಯಾಗೆ ಈ ಪ್ರಶ್ನೆಗೆ ಆಗ ಉತ್ತರ ಸಿಕ್ಕಿದಂತಿಲ್ಲ. 1992–93ರ ಹೊತ್ತಿಗೆ ಕನ್ನಡ ಕವಯಿತ್ರಿ ಸ. ಉಷಾಗೆ ಇದಕ್ಕೆ ಉತ್ತರ ಸಿಕ್ಕಿತು: ರುರು ಎಂಬ ಋಷಿಯ ಪತ್ನಿ ಪ್ರಮದ್ವರೆ ನಂದನವನದಲ್ಲಿ ಹಾವು ಕಚ್ಚಿ ಸಾಯುತ್ತಾಳೆ. ಶೋಕದಿಂದ ಪ್ರಲಾಪಿಸುತ್ತಿದ್ದ ರುರುವಿಗೆ 'ನಿನ್ನ ಅರ್ಧ ಆಯುಸ್ಸು ಕೊಟ್ಟರೆ ಪ್ರಮದ್ವರೆ ಬದುಕಿ ಬರುತ್ತಾಳೆ' ಎಂದು ದೇವತೆಗಳು ಹೇಳಿಕಳಿಸುತ್ತಾರೆ. ರುರು ಪತ್ನಿಗೆ ಅರ್ಧ ಆಯಸ್ಸು ಕೊಟ್ಟು ಆಕೆಯನ್ನು ಉಳಿಸಿಕೊಳ್ಳುತ್ತಾನೆ.'

ಈ ಪುರಾಣ ಕತೆಯನ್ನು 'ರುರು ಪ್ರಮದಾ ಪ್ರೀತಿ' ಎಂಬ ಉತ್ಕಟ ಪ್ರೇಮಕವಿತೆಯನ್ನಾಗಿಸಿದ ಉಷಾ ಅವರ ಕವಿತೆ ಹೀಗೆ ಕೊನೆಯಾಗುತ್ತದೆ:

ಪ್ರೇಮಪ್ರಮತ್ತ
ರುರು ಪ್ರಮದಾ ಪ್ರೀತಿಗೆ
ಲೋಕದ ಹಂಗಿಲ್ಲ.

ಲೋಹಿಯಾಗೆ ಈ ಕತೆ ಸಿಕ್ಕಿದ್ದರೆ ಹೇಗೆ ವ್ಯಾಖ್ಯಾನಿಸುತ್ತಿದ್ದರೋ! ಅದೇನೇ ಇರಲಿ, 'ದ್ರೌಪದಿಯೋ? ಸಾವಿತ್ರಿಯೋ?' ಎಂಬ ಲೋಹಿಯಾ ವಿಶ್ಲೇಷಣೆಗೆ ಮರಳೋಣ:

'ಸಾವಿತ್ರಿಯ ರೀತಿಯ ಕತೆಗಳು ಏಕಮುಖವಾಗಿರದೆ ಎರಡೂ ದಿಕ್ಕಿನಲ್ಲಿ ಕುಡಿಯೊಡೆದು ಬೆಳೆಯುವಂಥದಾಗಿದ್ದರೆ ಹೆಚ್ಚು ಆನಂದದಾಯಕವಾಗಿರುತ್ತಿತ್ತು. ಸಮಾನತೆಯ ಆಧಾರದ ಮೇಲೆ ಪ್ರಪಂಚದಲ್ಲಿ ಏನಾದರೊಂದನ್ನು ಸೃಷ್ಟಿಸಬೇಕೆನ್ನುವ ನನ್ನಂಥ ವ್ಯಕ್ತಿಯಲ್ಲಾದರೂ ಹುಟ್ಟುವ ಪ್ರಶ್ನೆ ಇದು: ಪತಿವ್ರತೆಗೆ ಗಟ್ಟಿ ಸಂಕೇತವಾಗಿ ಸಾವಿತ್ರಿಯು ಹಿಂದೂಗಳಲ್ಲಿ ಅಥವಾ ಭಾರತದಲ್ಲಿ ಇರುವಂತೆ, ಸತಿವ್ರತನ ಸಂಕೇತವಾಗಿ ಯಾವನಾದರೂ ಒಬ್ಬ ಹೃದಯಸಂಪನ್ನನಾದ ಗಂಡು ಇರಲೇಬೇಕಲ್ಲವೆ?

'ಆದರೆ ಅಂಥವನಿಲ್ಲ ಎಂದ ಮೇಲೆ ಇದರಿಂದ ಸ್ಪಷ್ಟವಾಗುವ ಅಂಶ ಇದು: ಯಾವತ್ತೋ ಒಂದು ದಿನ ಈ ಕತೆಗಳು ಥಟ್ಟನೆ ಹುಟ್ಟಿಕೊಂಡವುಗಳಲ್ಲ. ಈ ಘಟನೆಗಳು ನಡೆದಿವೆ ಎಂದೇ ಇಟ್ಟುಕೊಳ್ಳಿ. ಅವತ್ತಿನಿಂದ ಇವತ್ತಿನವರೆಗೆ ಭಾರತೀಯ ಮನಸ್ಸಿನಲ್ಲಿ ತನ್ನ ಪತಿಯ ಶರೀರ, ಮನಸ್ಸು ಅಥವಾ ಆತ್ಮದೊಂದಿಗೆ ಬೆಸೆದುಕೊಂಡಿರುವ ಪತಿವ್ರತೆಯ ಬಗೆಗೆ, ಪಾತಿವ್ರತ್ಯ ಧರ್ಮದ ಪ್ರತೀಕವಾಗಿರುವ ಆ ಮಹಿಳೆಯ ಬಗೆಗೆ ಎಂಥ ದೃಢ ನಂಬಿಕೆಯಿದೆ ಎಂಬುದು ಗೊತ್ತಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಹೆಣ್ಣಿನ ಬಗೆಗೆ ಗಂಡಸಿನ ಮನಸ್ಸಿನಲ್ಲಿ ಅದೇ ಬಗೆಯ ಶ್ರದ್ಧೆ, ಪ್ರೀತ್ಯಾದರಗಳು ಇರುವ ಕತೆಯಾಗಲೀ, ಗಂಡಿನ ಮನಸ್ಸಿನಲ್ಲಿ ಎಂದೂ ಮುಕ್ಕಾಗದ, ಜನ್ಮಜನ್ಮಾಂತರಗಳಿಂದ ನಿರಂತರವಾಗಿ ಸಾಗಿ ಬಂದ ಪ್ರೇಮವನ್ನು ಒಳಗೊಂಡ ಕತೆಯಾಗಲೀ ಸಿಗುವುದೇ ಇಲ್ಲ.'



ಲೋಹಿಯಾ ಈ ಪ್ರಶ್ನೆ ಎತ್ತಿದಾಗ ಜನ ಅವರನ್ನು ಕೇಳುತ್ತಿದ್ದರು: 'ಇಂಥ ಯಾವುದೇ ಉದಾಹರಣೆಯಿಲ್ಲ ಎಂದು ನೀವು ಹೇಳಿಬಿಡುತ್ತೀರಿ. ಆದರೆ, ರಾಮ ಇದ್ದಾನಲ್ಲ?'

ಅದಕ್ಕೆ ಲೋಹಿಯಾ ಉತ್ತರ:

'ರಾಮ ತನ್ನ ಜೀವನಸಂಗಾತಿಯಲ್ಲಿ ಪರಮ ಅನುರಕ್ತನೆಂದು ಜನ ಹೇಳುತ್ತಿರುತ್ತಾರೆ... ಆದರೆ ರಾಮನಲ್ಲಿ ನನಗೆ ಮೂರು, ನಾಲ್ಕು ದೋಷಗಳು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾದದ್ದು ಸೀತೆಗೆ ಸಂಬಂಧಿಸಿದ್ದು. ಎಷ್ಟೋ ಜನ, ಅದರಲ್ಲೂ ನವಯುವಕರು, ರಾಮನಲ್ಲಿ ಪ್ರಜಾಪ್ರಭುತ್ವವನ್ನು ಅರಸುವ ಪ್ರಯತ್ನ ಮಾಡುತ್ತಾರೆ; 'ಒಬ್ಬ ಅಗಸ ಹೇಳಿದ್ದಕ್ಕೆ ಆತ ತನ್ನ ಹೆಂಡತಿಯನ್ನು ಮನೆಯಿಂದ ಹೊರಗಟ್ಟಿದ. ರಾಮ ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ, ನೋಡಿ!' ಎನ್ನುತ್ತಿರುತ್ತಾರೆ.

'ಆದರೆ ಅಗಸ ಹೇಳಿದ್ದಕ್ಕೆ ರಾಮ ಹೆಂಡತಿಯನ್ನು ಹೊರಗಟ್ಟಿದ ಎಂದು ಒಪ್ಪಿಕೊಂಡರೂ, ಅಗ್ನಿಪರೀಕ್ಷೆಗೆ ಯಾವ ಕಾರಣವಿತ್ತು? ಆಗ ಯಾರು ಯಾವ ಬೇಡಿಕೆಯನ್ನಿಟ್ಟಿದ್ದರು?' ಎಂದು ಪ್ರಶ್ನಿಸುತ್ತಾ ಲೋಹಿಯಾ ಹೇಳುತ್ತಾರೆ:

'ಯಾರೋ ಒಬ್ಬ ಪ್ರಜೆ ಈ ಬೇಡಿಕೆಯನ್ನಿಟ್ಟಿದ್ದ ಎಂದು ಒಂದು ಕ್ಷಣ ಒಪ್ಪಿಕೊಂಡರೂ, ಪ್ರಜಾಪ್ರಭುತ್ವದಲ್ಲಿ ಯಾರು ಏನು ಬೇಕಾದರೂ ಹೇಳಬಹುದು ಎಂದು ಅರ್ಥವೇನು? ಒಂದು ವೇಳೆ ರಾಮ ಪ್ರಜಾಪ್ರಭುತ್ವದ ಬಗೆಗೆ ಈ ಮಟ್ಟದ ಪ್ರೀತಿಯನ್ನಿಟ್ಟುಕೊಂಡಿದ್ದೇ ಆದರೆ, ಅವನ ಬಳಿ ಬೇರೆ ಮಾರ್ಗವೇ ಇರಲಿಲ್ಲವೇನು? ರಾಮ ಮನಸ್ಸು ಮಾಡಿದ್ದರೆ ಸಿಂಹಾಸನವನ್ನೂ ತೊರೆದು, ಸೀತೆಯ ಜತೆಯಲ್ಲಿ ಮತ್ತೆ ವನವಾಸಕ್ಕೆ ಹೋಗಲು ಆಗುತ್ತಿರಲಿಲ್ಲವೇನು?

'ಇದೊಂದು ವಿಕಾರವಾದ ಪ್ರಸಂಗ. ಸೀತೆಯೊಡನೆ ರಾಮ ವ್ಯವಹರಿಸಿದ ಬಗೆಯನ್ನು ಕಂಡೂ, ಭಾರತೀಯ ನಾರಿಯರು ಆತನ ಬಗೆಗೆ ಇಟ್ಟುಕೊಂಡಿರುವ ಪ್ರೀತಿಯನ್ನು ನೋಡಿ ನನಗೆ ಎಷ್ಟೋ ಸಲ ಅಚ್ಚರಿಯಾಗಿದೆ. ಆದರೂ ರಾಜಕಾರಣಕ್ಕೆ ಸಂಬಂಧಪಟ್ಟಂತೆ ರಾಮನ ಮರ್ಯಾದಾ ಪುರುಷೋತ್ತಮನ ರೂಪ ಎಷ್ಟು ಪ್ರಖರವಾಗಿದೆ ಎಂದರೆ, ರಾಮನ ವ್ಯಕ್ತಿತ್ವದಲ್ಲಿ ಕಾಣುವ ನಾಲ್ಕೈದು ದೋಷಗಳನ್ನು ಜನ ಚೆನ್ನಾಗಿ ಅರ್ಥ ಮಾಡಿಕೊಂಡು, ರಾಮನಲ್ಲಿರುವ ಆ ಮಹಾನ್‌ಗುಣದಿಂದ ಏನನ್ನಾದರೂ ಕಲಿಯಲಿ ಎಂದು ಆಶಿಸುವೆ.'

ಸಾವಿತ್ರಿಯ ಪತಿನಿಷ್ಠೆಗೆ ಸಮನಾದ ಪುರುಷನ ಸತಿನಿಷ್ಠೆಗೆ ರಾಮನ ಕತೆಯಲ್ಲಿ ಉತ್ತರವಿಲ್ಲ ಎನ್ನುವ ಲೋಹಿಯಾ ಹೇಳುತ್ತಾರೆ: 'ಇಂಥ ಸತಿವ್ರತನ ಕತೆಯನ್ನು ಹುಡುಕಲು ಎಷ್ಟು ಸಮಯ ವ್ಯಯವಾಗುತ್ತದೆಯೆಂದರೆ, ಇಷ್ಟು ಸಮಯ ವ್ಯಯ ಮಾಡಲು ಆ ಕತೆ ಅರ್ಹವಾದುದಲ್ಲ. ನೀವು ಅಂಥ ಕತೆಯನ್ನು ಹುಡುಕುವುದರಲ್ಲಿ ಯಶಸ್ವಿಯಾದರೂ ಅದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಯಾಕೆಂದರೆ, ಇವತ್ತಿನ ಭಾರತದ ಬೌದ್ಧಿಕತೆಯಲ್ಲಿ ಈ ಕತೆಯನ್ನು ಸ್ವೀಕರಿಸುವಷ್ಟು ಸ್ಥಳವಿಲ್ಲ.'

ಲೋಹಿಯಾ ಎತ್ತಿದ ಪ್ರಶ್ನೆಗಳನ್ನು ಇವತ್ತು